ನನ್ನ ಮಗ, ಗದ್ದುಗೆ ನನಗೆ ಬೇಡ... ನಿಮಗೇ ಇರಲಿ, ನನ್ನ ಹಣ ಅದಕ್ಕೆ ಕೊಡುವುದಿಲ್ಲ ಅಂದುಬಿಟ್ಟ...' ಪೆಚ್ಚು ನಗೆ ಬೀರಿ ನಿಲ್ಲಿಸಿದ ಅಬ್ದುಲ್ಲ.

'ಈಗ ಮಗನೊಂದಿಗೆ ಸಂಬಂಧ ಸರಿಯಿಲ್ಲವಾ?' ಕೇಳಿದೆ ನಾನು.

'ಹಾಗೇನಿಲ್ಲ. ವರ್ಷಕ್ಕೊಂದು ಬಾರಿ ಹೋಗುತ್ತೇನೆ. ಒಂದು ದಿನ ಇದ್ದು ಬರುತ್ತೇನೆ. ದುಃಖದ ಸಂಗತಿಯೆಂದರೆ ನಮ್ಮದು ರಾಜವಂಶ, ಪ್ರಜೆಗಳಿಗೆ ಸಹಾಯ ಮಾಡುವ ರಾಜನಂತೆ ಬದುಕಬೇಕು... ಮನೆತನದ ಮಾನ ಮರ್ಯಾದೆ ಉಳಿಸಿಕೊಳ್ಳಬೇಕು... ಇದರಲ್ಲೆಲ್ಲ ಆತನಿಗೆ ಆಸಕ್ತಿಯೇ ಇಲ್ಲ. ತಾನು, ತನ್ನ ಹೆಂಡತಿ, ತನ್ನ ಮಕ್ಕಳು, ಶಾಲೆ, ಕಾರು ಇಷ್ಟು ಬಿಟ್ಟರೆ ನನ್ನ ಮಗನಿಗೆ ಬೇರೆ ಆಸಕ್ತಿಯೇ ಇಲ್ಲ. ಶಾಲೆ ಕೊಟ್ಟ ಸಣ್ಣ ಮನೆಯೊಂದರಲ್ಲಿದ್ದಾನೆ. ಅಲ್ಲಿ ಮಜ್ಲೀಸ್ ನಡೆಸಲು ಜಾಗವೇ ಇಲ್ಲ. ರಾಜ ಮನೆತನ ಅಂದಾಗ ನಕ್ಕುಬಿಡುತ್ತಿದ್ದ. ಅವನನ್ನು ಕಟ್ಟಿಕೊಂಡು ಅದುಹೇಗೆ ಗದ್ದುಗೆಗೆ ಅನ್ಯಾಯವಾಗದಂತೆ ಬದುಕುವುದು ಎಂಬ ದೊಡ್ಡಚಿಂತೆಯಲ್ಲಿದ್ದೆ. ಆ ಕಾಲದಲ್ಲಿ ನನ್ನ ಕೈ ಹಿಡಿದವರು ಸಾಹುಕಾರರು ಮತ್ತು ನೀವು. ತಿಂಗಳು ತಿಂಗಳು ಇಷ್ಟು ಎಂದು ಕಪ್ಪ ಕೊಟ್ಟು ನಿಮ್ಮ ಗೋದಾಮಿನ ಪೂರ್ತಿ ರಕ್ಷಣೆಯ ಹೊಣೆ ನನ್ನ ಮೇಲೆ ಹಾಕಿದವರು ನೀವು. ಅಲ್ಲಿ ಸುತ್ತಲಿದ್ದ ಹತ್ತಾರು ಮಂದಿಯೇ ನನ್ನವರು ಅಂತ ತಿಳಿದುಕೊಂಡು ಮಜ್ಲೀಸ್ ಆರಂಭಿಸಿದೆ. ಜನರಿಲ್ಲದೆ, ಹಣ ಖರ್ಚುಮಾಡಲಾಗದೆ ಕಂದಿ ಹೋಗಿದ್ದ ಮಜ್ಲೀಸಿನ ಗತ್ತುಗಮ್ಮತ್ತು ತಕ್ಕಮಟ್ಟಿಗೆ ಮರಳಿ ಸಿಕ್ಕಿತು. ಒಂದೂ ಒಂಟೆಯಿಲ್ಲದವನ ಮಜ್ಲೀಸಂತೆ ಎಂದು ಜನ ಹೀಯಾಳಿಸಬಾರದೆಂಬ ಕಾರಣಕ್ಕೆ ಒಂದು ಒಂಟೆ ಖರೀದಿಸಿದೆ. ಇಲ್ಲೇ ಕಣ್ಣಿಗೆ ಕಾಣುವಷ್ಟು ದೂರದಲ್ಲಿ ಕಟ್ಟಿ ಹಾಕಿದ್ದೇನೆ. ಮನಸೋ ಇಚ್ಛೆ ಒಂಟೆ ಸವಾರಿ, ಬೇಕೆನಿಸಿದಾಗ ಕುರಿಮಾಂಸದ ಊಟ, ಹತ್ತಾರು ಮಂದಿಯ ಮಜ್ಲೀಸಿನಲ್ಲಿ ಹರಟೆ ವಿನೋದ... ಇಪ್ಪತ್ತು ವರ್ಷ ಹೀಗೆ ಸಂಭ್ರಮದಿಂದ ಬದುಕು ಮುನ್ನಡೆಸಲು ಸಹಾಯ ಮಾಡಿದವರು ನೀವು' ಡ್ರೈವರ್ ನಿಲ್ಲಿಸಿದಾಗ ತುಂಬಿ ಬಂದ ತನ್ನ ಕಣ್ಣುಗಳನ್ನು ಒರೆಸಿಕೊಂಡು ಅಬ್ದುಲ್ಲ ಬೆಚ್ಚಗೆ ನನ್ನ ಕೈ ಹಿಡಿದಿದ್ದ.

★★★

ಅಬ್ದುಲ್ಲನಿಗೆ ವಯಸ್ಸೆಷ್ಟು ಎಂಬುದಕ್ಕೆ ನಮ್ಮಲ್ಲಿ ದಾಖಲೆಯಿರಲಿಲ್ಲ. ದಾಖಲೆ ಅವನಲ್ಲಿದ್ದರೆ ತಾನೆ ನಮ್ಮ ಕೈಗೆ ಸಿಗುವುದು! ನಮ್ಮಲ್ಲಿ ಅರವತ್ತೈದು ನಿವೃತ್ತಿಯ ವಯಸ್ಸು. ಆತ ಬಂದು ಸೇರಿಕೊಳ್ಳುವಾಗಲೇ ಆತನ ಮಕ್ಕಳಿಬ್ಬರಿಗೂ ಮದುವೆಯಾಗಿ, ಮಕ್ಕಳಾಗಿ, ಅಬ್ದುಲ್ಲ ಅಜ್ಜನೆನಿಸಿಕೊಂಡಿದ್ದ. ಆಗ ಮಗನಿಗೆ ವಯಸ್ಸು ಇಪ್ಪತ್ತೈದು, ಅಬ್ದುಲ್ಲನಿಗೆ ಐವತ್ತು ಎಂದು ಹಿಡಿದರೂ ನಮ್ಮಲ್ಲಿ ಸೇರಿ ಇಪ್ಪತ್ತು ವರ್ಷಗಳು ಸಂದುಹೋಗಿದ್ದವು. ಅಬ್ದುಲ್ಲನಿಗೆ ಎಪ್ಪತ್ತರ ಮೇಲೆ ವಯಸ್ಸಾಗಿರುವುದಕ್ಕೆ ಯಾವ ಸಂದೇಹವೂ ಇಲ್ಲ ಎಂದು ಹುಡುಗರು ಮಾತಾಡುತ್ತಿದ್ದುದು ಸಾಹುಕಾರರ ಕಿವಿಗೂ ತಲುಪಿತು. ಈ ವರ್ಷದ ಅಂತ್ಯಕ್ಕೆ ಆತನಿಗೂ ನಿವೃತ್ತಿ ಕೊಟ್ಟುಬಿಡೋಣ ಅಂದರು. ಅಬ್ದುಲ್ಲನ ರಾಜ್ಯಭಾರದ ಮಾಹಿತಿ ಅವರಿಗೂ ಇದ್ದಿರಬೇಕು. 'ನಾವು ಕೊಡುವ ಕಪ್ಪಕ್ಕೆ ಒಪ್ಪಿ ಅವನ ಉತ್ತರಾಧಿಕಾರಿಯಾಗಲು ಆತನ ವಂಶದ ಹುಡುಗರು ಯಾರಾದರೂ ಇದ್ದಾರಾ ಅಂತ ಅವನಲ್ಲಿ ಕೇಳು, ಸಿಕ್ಕಿದರೆ ನೇಮಿಸಿಕೊಳ್ಳೋಣ, ಅಳಿದುಳಿದ ತನ್ನ ರಾಜ್ಯ ಅನ್ಯರ ಪಾಲಾಯಿತು ಅಂತ ಆತ ಸುಮ್ಮನೆ ದುಃಖಿಸುವುದು ಬೇಡ' ಅಂತ ನಕ್ಕು ಸೇರಿಸಿದ್ದರು ಸಾಹುಕಾರರು.

ಅಬ್ದುಲ್ಲನನ್ನು ಬರಹೇಳಿ ಈ ಮಾತನ್ನು ಅವನಿಗೆ ವಿವರವಾಗಿ ತಿಳಿಸಿ ಹೇಳಿದೆ.

